


### ಪಂಢರಪುರ ಎಲ್ಲಿದೆ?

ಪಂಢರಪುರವು ನೆರೆಯ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯಲ್ಲಿರುವ ಪ್ರಮುಖ ಯಾತ್ರಾ ಸ್ಥಳವಾಗಿದೆ. ಭೀಮಾ ನದಿಯ ತಟದಲ್ಲಿರುವ ಶ್ರೀಕ್ಷೇತ್ರವು ಸೊಲ್ಲಾ ಪುರದಿಂದ 80 ಕಿ.ಮೀ., ವಿಜಯಪುರದಿಂದ 110 ಕಿ.ಮೀ. ದೂರದಲ್ಲಿ ಇದೆ. ಪಂಢರಪುರಕ್ಕೆ ತೆರಳಲು ವಿಜಯಪುರ, ಸೊಲ್ಲಾಪುರದಿಂದ ಬಸ್ಸು, ರೈಲು, ಟ್ಯಾಕ್ಸಿ ವ್ಯವಸ್ಥೆ ಇದೆ. ಪ್ರತಿ ದಿನ ಮೈಸೂರು–ಪಂಢರಪುರ ನಡುವೆ 'ಗೋಳಗುಮ್ಮಟ ಎಕ್ಸ್‌ಪ್ರೆಸ್' ರೈಲು ಸಂಚರಿಸುತ್ತದೆ.

ಏಕಾದಶಿ ದಿನದಂದು ವಾರ್ಕರಿ ಸಪ್ತಾಹ ಜರಗುತ್ತದೆ. ಸಂತ ಜ್ಞಾನೇಶ್ವರ, ಏಕನಾಥ, ತುಕಾರಾಮ, ಪುಂಡಲೀಕ ನಾಮದೇವ, ದಾಮಾಜಿ, ಮೀರಾಬಾಯಿ, ಮುಕ್ತಾಬಾಯಿ, ಕಬೀರದಾಸ, ರಾಮದಾಸ, ತುಳಸಿದಾಸ, ಸೂರದಾಸರ ಅಭಂಗ ಪದ್ಯಗಳನ್ನು ವಾರಕರಿ ರಾಗದಿಂದ ಹಾಡುತ್ತಾ ಕುಣಿಯುತ್ತ ಭಜನೆ, ನಾಮ ಸಂಕೀರ್ತನೆಗಳಲ್ಲಿ ಭಕ್ತರು ಮೈಮರೆಯುವುದನ್ನು ಒಮ್ಮೆಯಾದರೂ ನೋಡಲೇಬೇಕು.

ಪಂಢರಪುರಕ್ಕೆ ಬರುವ ಭಕ್ತರು ಆರಂಭದಲ್ಲಿ ಅರ್ಧ ಚಂದ್ರಾಕೃತಿಯಲ್ಲಿ ಹರಿಯುವ ಭೀಮೆಯ (ಚಂದ್ರಭಾಗ) ಮಡಿಲಿನಲ್ಲಿ ಮಿಂದು ಸರತಿ ಸಾಲಿನಲ್ಲಿ ಸಾಗಿ ವಿಠಲನ ಪಾದಗಳಿಗೆ ಹಣೆ ಮಣಿದು, ರುಕ್ಮಿಣಿಗೆ ನಮಿಸಿ ಪುನೀತರಾಗುತ್ತಾರೆ.

ಪ್ರತಿ ಆಷಾಢ ಏಕಾದಶಿ ಮತ್ತು ಕಾರ್ತೀಕ ಮಾಸದ ಏಕಾದಶಿ ಮಹಾಪೂಜೆಗೂ ಮುನ್ನಾ ಸಂಪ್ರದಾಯದಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ಸರ್ಕಾರದ ಪರವಾಗಿ ಪ್ರಥಮ ಪೂಜೆ ನೆರವೇರಿಸುತ್ತಾರೆ. ಬಳಿಕ ಭಕ್ತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ.

ಏಕಾದಶಿಯಂದು ಪಂಢರಪುರದ ಪ್ರಮುಖ ಬೀದಿಗಳಲ್ಲಿ ರಾಧಾರಾಣಿ, ವಿಠಲ, ರುಕ್ಮಿಣಿಯ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ನಗರ ಪ್ರದಕ್ಷಿಣೆ ವೇಳೆ ವಾರಕರಿಗಳು ಅಭಂಗಗಳನ್ನು ಹಾಡುತ್ತಾ, ಕುಣಿಯುತ್ತಾ, ಭಜನೆ, ಸಂಕೀರ್ತನೆಗಳಲ್ಲಿ ಮೈಮರೆಯುತ್ತಾರೆ. ಆಷಾಢ ಮತ್ತು ಕಾರ್ತೀಕ ಏಕಾದಶಿಗಳಂದು ಏನಿಲ್ಲವೆಂದರೂ ಸರಿಸುಮಾರು 10 ಲಕ್ಷಕ್ಕೂ ಅಧಿಕ ಭಕ್ತರು ಪಂಢರಪುರಕ್ಕೆ ಆಗಮಿಸುತ್ತಾರೆ. ಈ ವೇಳೆ 'ಪಂಢರಿ ನಗರ' ಸಂಪೂರ್ಣ ವಿಠಲಮಯವಾಗಿರುತ್ತದೆ.

ಚಂದ್ರಭಾಗ ನದಿ ತೀರದಲ್ಲಿರುವ ಪುಂಡಲೀಕ ಮಂದಿರ, ಇಸ್ಕಾನ್ ಮಂದಿರ, ಘಾಟ್ ಪರಿಸರ ವಾರಕರಿಗಳಿಂದ ತುಂಬಿ ತುಳುಕುತ್ತಿರುತ್ತದೆ. ವಾರಕರಿಗಳು ವಿಠಲ ನಾಮ ಜಯ ಘೋಷ ಹೇಳುತ್ತಾ ಕುಣಿದು, ಹರಿನಾಮ ಧ್ವಜವನ್ನು ಹಾರಿಸಿ ಭಕ್ತಿಯಿಂದ ನಮಿಸುತ್ತಾರೆ. ಮಹಿಳಾ ವಾರಕಾರಿಗಳು ತಲೆಯ ಮೇಲೆ ನವಿಲುಗರಿಯ ಟೋಪಿ ಹಾಕಿಕೊಂಡು ಹೆಜ್ಜೆ ಹಾಕುತ್ತಾರೆ. ಭಕ್ತಿಯ ನಾದಕ್ಕೆ ನದಿ ತೀರದಲ್ಲಿ ಪ್ರಸನ್ನ ವಾತಾವರಣ ಕಂಡುಬರುತ್ತದೆ.

ಲಕ್ಷೋಪಲಕ್ಷ ಭಕ್ತರು ಪಾದಯಾತ್ರೆ, ವಾಹನಗಳ ಮೂಲಕ ವಿಠಲನ ಸನ್ನಿಧಿಗೆ ಆಗಮಿಸುವುದರಿಂದ ಆಷಾಢ, ಕಾರ್ತೀಕ ಏಕಾದಶಿಗಳಂದು ಪಂಢರಪುರದಲ್ಲಿ ಸಂಚಾರ ದಟ್ಟಣೆ ಅಧಿಕವಾಗಿರುತ್ತದೆ. ದೇವಸ್ಥಾನದಲ್ಲಿ ವಿಠಲನ ದರ್ಶನಕ್ಕೆ ಭಕ್ತರು ಮುಗಿಬೀಳುತ್ತಾರೆ.

### ಗರ್ಭಗುಡಿ ಭಕ್ತರಿಗೆ ಮುಕ್ತ

ಬಹುತೇಕ ದೇವಾಲಯಗಳಲ್ಲಿ ದೇವರ ಗರ್ಭಗುಡಿ ಪ್ರವೇಶಿಸಲು ಭಕ್ತರಿಗೆ ಅವಕಾಶವಿಲ್ಲ. ಆದರೆ, ಪಂಢರಪುರದಲ್ಲಿ ಭಕ್ತರು ಗರ್ಭಗುಡಿ ಪ್ರವೇಶಿಸಿ ವಿಠಲನ ಪಾದಮುಟ್ಟಿ, ಹಣೆ ಹಚ್ಚಿ ನಮಿಸಲು ಅವಕಾಶ ಇರುವುದು ವಿಶೇಷ. ವಿಠಲನ ಪಾದಗಳನ್ನು ಮುಟ್ಟುವ ದೈವಿಕ ಅನುಭವವು ಭಕ್ತರ ಆತ್ಮದ ಮೇಲೆ ಅಳಿಸಲಾಗದ ಗುರುತು ಬಿಡುವುದು ಖಚಿತ. ಜೊತೆಗೆ ರುಕ್ಮಿಣಿ ಮೂರ್ತಿಯನ್ನೂ ಮುಟ್ಟಿ ನಮಸ್ಕರಿಸಲು ಅವಕಾಶವಿದೆ. ಅಲ್ಲದೇ, ಭಕ್ತರು ದೇವಾಲಯಕ್ಕೆ ಬಂದು ದರ್ಶನ ಪಡೆದು ಮರಳಿದ ಬಳಿಕ ಅವರ ಕಾಲಿನ ಧೂಳನ್ನು ಪ್ರತಿದಿನ ಸಂಗ್ರಹಿಸಿ, ವಿಠಲನ ಹಣೆಗೆ ತಿಲಕವಿಡುವ ಸಂಪ್ರದಾಯ ರೂಢಿಯಲ್ಲಿದೆ.